ವರ್ಷ ಭಾರತಕ್ಕೆ ಹೋಗಲು ಯೋಚಿಸುತ್ತೇನೆ, ಅದರೆ ಅಷ್ಟು ಹಣವನ್ನು ಎಲ್ಲಿಂದ ತರಲಿ? ನನ್ನ ಸಮಸ್ಯೆಯನ್ನು ಯಾರಲ್ಲಿ ಹೇಳಿಕೊಳ್ಳಲಿ? ಜನ ನನ್ನ ಪರವಾಗಿ ಮಾತನಾಡುವರೋ, ಇಲ್ಲವೋ? ತಪ್ಪೆಲ್ಲಾ ನಿಮ್ಮದೇ ಎಂದರೆ? ಅಬ್ರಾಹಮ್, ಲಾರ್ಸ್, ಮಾರ್ಕೋ... ಇಂಥ ವ್ಯಕ್ತಿಗಳನ್ನು ಪತಿಯಾಗಿ ಪಡೆದ ಯಾವ ಹೆಣ್ಣಾದರೂ ದುಃಖವನ್ನು ಅನುಭವಿಸುವುದು ನಿಶ್ಚಿತ.

ನಾನು ಮಾರ್ಕೋನ ಇಡೀ ಖರ್ಚನ್ನು ಭರಿಸಬೇಕೆಂದು ಮಾರ್ಕೋ ನನ್ನಿಂದ ಬಯಸುತ್ತಿದ್ದ. ಅವನು ನನ್ನನ್ನು ಆರ್ಥಿಕವಾಗಿ ಕೆಳಗೆ ತಳ್ಳಲು ಬಯಸುತ್ತಾನೆ. ನನ್ನ ಅಸ್ತಿತ್ವವನ್ನೇ ನಾಶ ಮಾಡಲು ಬಯಸುತ್ತಾನೆ. 'ನೀನು ಸಂಪಾದನೆ ಮಾಡದ ಹೆಂಡತಿ! ನಿನಗೆ ಸದಾ ಹಣದ ಅವಶ್ಯಕತೆ ಇರುತ್ತದೆ' ಎಂದು ಚುಚ್ಚುಮಾತನ್ನು ಹೇಳುತ್ತಿದ್ದ.

'ನೀವು ಅತಿ ಜಿಪುಣರು' ಎನ್ನುತ್ತಿದ್ದೆ ನಾನು.

ಪರಿಸ್ಥಿತಿ ಬಿಗಡಾಯಿಸಿದಾಗ, ಮಧ್ಯಸ್ಥರೊಬ್ಬರ ಸಹಾಯವನ್ನು ಪಡೆಯಬೇಕೆಂದು ಅನ್ನಿಸಿತು. ನಾನು ನಮ್ಮ ಮನೆಯ ಮೇಲಂತಸ್ತಿನಲ್ಲಿ ವಾಸಿಸುತ್ತಿದ್ದ ಏಲ್ಫ್ ಬಳಿಗೆ ಹೋದೆ. ಅವನು ಅನುಭವಿಯಾಗಿದ್ದು, ಬುದ್ಧಿವಂತನಾಗಿದ್ದ, ನಮ್ಮಿಬ್ಬರನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದ. ನಾವಿಬ್ಬರೂ ಅವನನ್ನು ಗೌರವದಿಂದ ನೋಡುತ್ತಿದ್ದೆವು. ಏಲ್ಫ್ ನನಗೇನಾದರೂ ಸಹಾಯ ಮಾಡಬಹುದು...

ಏಲ್ಫ್ ನಗುತ್ತಾ ಮಾರ್ಕೋಗೆ ಸಲಹೆಯಿತ್ತ, 'ನೀವು ರಜದ ಮೇಲೆ ಹೋಗಬೇಕು. ಯಾವುದಾದರೂ ಪ್ರವಾಸವನ್ನು ಕೈಗೊಳ್ಳಿ. ಒಂದು ರಾತ್ರಿಯ ಡೇಟ್‌ಗೆ ಪ್ಲಾನ್ ಮಾಡಿಕೊಳ್ಳಿ. ಹಣಕ್ಕಾಗಿ ಜಗಳ ಮಾಡಬೇಡಿ. ನಿಮ್ಮ ಹತ್ರ ಬೇಕಾದಷ್ಟು ಹಣವಿದೆ.'

ಅವನು ನಾನು ಒಂಟಿಯಿದ್ದಾಗ ಹೇಳಿದ, 'ನಾವು ಪರಸ್ಪರ ಅರ್ಥ ಮಾಡಿಕೊಳ್ಳಲು ಕಷ್ಟವಾಗಿದ್ದೇ ನಾನು ನನ್ನ ಹೆಂಡತಿಯಿಂದ ಬೇರೆಯಾಗಲು ಕಾರಣವಾಗಿತ್ತು. ಒಂದೇ ಜೆಂಡರ್ ಜನರೊಂದಿಗಿರುವುದು ಉತ್ತಮ.' ಏಲ್ಫ್ ನನಗೇನೂ ಸಹಾಯ ಮಾಡದಾದ. ಆದರೆ ನನಗೆ ಏಲ್ಫ್ ಮತ್ತು ಕಾರ್ಲ್ ಜೊತೆಯಲ್ಲಿ ಪ್ರೀತಿಯಿಂದ ಇರುವುದನ್ನು ನೋಡಿ ಹೊಟ್ಟೆಕಿಚ್ಚಾಗುತ್ತಿತ್ತು. ಹಣ, ಸೆಕ್ಸ್, ಮನೆಯ ಕೆಲಸ–ಕಾರ್ಯಗಳು, ಮೋಜು–ಮಸ್ತಿ ಎಲ್ಲದರಲ್ಲೂ ಅವರ ನಡುವೆ ಹೊಂದಾಣಿಕೆ ಮತ್ತು ಪಾಲುದಾರಿಕೆ ಕಾಣಬರುತ್ತಿತ್ತು. ಅವರ ಸಮಲೈಂಗಿಕ ಸಂಬಂಧ ನಮ್ಮ ನೇರ ಸಂಬಂಧಗಳಿಗಿಂತ ಹೆಚ್ಚು ಸ್ಥಿರವಾಗಿದ್ದು, ಪ್ರೀತಿಪೂರ್ವಕವಾಗಿತ್ತು.

ನಾನು ವ್ಯಗ್ರಳಾಗಿ 'ಮಮ್ಸ್ ನೆಟ್' ಆನ್‌ಲೈನಿನಲ್ಲಿ ನನ್ನ ಸಮಸ್ಯೆಯನ್ನು ಬರೆಯಲಾರಂಭಿಸಿದೆ:

'ನನ್ನ ಪತಿ ನನಗೆ ಹಣ ಕೊಡಲು ಸತಾಯಿಸುತ್ತಾನೆ. ತನ್ನ ಹಣದ ಬಗ್ಗೆ ನನಗೆ ತಿಳಿಸುವುದಿಲ್ಲ.'

ಜಗತ್ತಿನ ಬಹುತೇಕ ಮಹಿಳೆಯರು ನನ್ನ ಪೋಸ್ಟ್‌ಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿ, ಸಲಹೆಯಿತ್ತರು:

'ನಿಮ್ಮ ಹಸ್ಬೆಂಡ್ ಒಬ್ಬ 'ಫೈನಾನ್ಸಿಯಲ್ ಅಬ್ಯುಸಿವ್ ಹಸ್ಬೆಂಡ್' ಆಗಿದ್ದು, ಅವನು ಬದಲಾಗುವುದಿಲ್ಲ. ಅವನನ್ನು ಕೂಡಲೇ ತ್ಯಜಿಸಿ.'

ಏಲ್ಫ್‌ನೊಂದಿಗೆ ಪರಾಮರ್ಶೆ ಮಾಡಿ, ಮಮ್ಸ್ ನೆಟ್(ಡಿಜಿಟಲ್ ಟೂಲ್)ನಲ್ಲಿ ಪೋಸ್ಟ್ ಮಾಡಿದ ನಂತರ, ನಾನು ಓರ್ವ ವಿತ್ತೀಯ ಸಲಹಾಗಾರರನ್ನು ಸಂಪರ್ಕಿಸಿದೆ. ಅವರೂ ವಿಫಲರಾದರು. ಕಡೆಗೆ ನಾವು ಮ್ಯಾರೇಜ್ ಕೌನ್ಸಿಲರ್ ಬಳಿಗೆ ಹೋದೆವು, ಏಕೆಂದರೆ ಸಮಸ್ಯೆ ಹಣಕ್ಕೆ ಮಾತ್ರ ಸೀಮಿತವಾಗದೆ, ಸಂಬಂಧವೂ ಸಂಕೀರ್ಣವಾಗಿತ್ತು.

ಓಹ್, ಆ ದೀರ್ಘ ಸರಪಳಿ... ಮ್ಯಾರೇಜ್ ಕೌನ್ಸಿಲಿಂಗ್ ಕ್ಲಾಸ್‌ಗಳು... ಕೋರ್ಟಿಗೆ ಅಲೆದಾಟ... ನಾವು ನಮ್ಮ ದಾಂಪತ್ಯವನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದೆವು. ಆದರೆ ಕಹಿ ಹೆಚ್ಚುತ್ತಲೇ ಇತ್ತು, ಇನ್ನು ನಾವು ಜೊತೆಯಲ್ಲಿರಬಾರದು ಎಂದು ಇಬ್ಬರಿಗೂ ಅನ್ನಿಸಿತು.

ಅಬ್ರಾಹಮ್‌ನಿಂದ ಬೇರೆಯಾದಾಗ ನನ್ನಲ್ಲಿ ಯೌವನವಿತ್ತು, ಅನೇಕ ವಿಕಲ್ಪಗಳಿದ್ದವು. ನಾವು ಯಾರಿಗೂ ತಿಳಿಯದಂತೆ ನಮ್ಮ ನಮ್ಮ ಹೊಸ ಹಾದಿಯನ್ನು ಹುಡುಕಿಕೊಂಡಿದ್ದೆವು. ಲಾರ್ಸ್‌ನೊಂದಿಗಿನ ಘಟನೆಗಳು ತಮ್ಮಷ್ಟಕ್ಕೆ ತಾವೇ ಘಟಿಸುತ್ತಿದ್ದವು. ಅಲ್ಲಿ ಪೊಲೀಸರು ಸೇರಿದ್ದರು. ಅವನ ಮೇಲೆ ಕ್ರಿಮಿನಲ್ ಕೇಸ್ ಆಗಿತ್ತು. ಅವನು ಸೈಕೊ ಆಗಿದ್ದ. ಅವರ ತಾಯಿಯೇ ನನಗೆ, ಅವನಿಂದ ವಿಚ್ಛೇದನವನ್ನು ಪಡೆಯುವಂತೆ ಸಲಹೆಯಿತ್ತರು. ನನಗೆ ಅವನ ಮಾವ ಫಿಲಿಪ್‌ರ ಸಹಾನುಭೂತಿಯಿತ್ತು.

ಆದರೆ ಈಗ ಪರಿಸ್ಥಿತಿಗಳು ತೀರ ಭಿನ್ನವಾಗಿದ್ದವು. ನಾನೀಗ ನಡುವಯಸ್ಸಿನ, ದಢೂತಿ ಮಹಿಳೆಯಾಗುತ್ತಿದ್ದೆ. ನಾನು ನನ್ನ ವಿವಾಹವನ್ನು ಉಳಿಸಿಕೊಳ್ಳಲು ಬಯಸುತ್ತಿದ್ದೆ. ಮಾರ್ಕೋನೊಂದಿಗೆ ನನ್ನ ವಿವಾಹ ವಿಜೃಂಭಣೆಯಿಂದ ನೆರವೇರಿತ್ತು. ಅನೇಕ ಸಂಪ್ರದಾಯಗಳನ್ನು ಪಾಲಿಸಲಾಗಿತ್ತು. ನಮ್ಮ ಜೋಡಿ ಸ್ವರ್ಗದಿಂದ ಸಿದ್ಧವಾಗಿ ಬಂದಿದೆ ಎಂದು ಅನ್ನಿಸುತ್ತಿತ್ತು. ನಮ್ಮ ಆರಂಭದ ದಾಂಪತ್ಯಜೀವನ ಅತ್ಯಂತ ಮಧುರವಾಗಿತ್ತು. ನಾನು ಸಣ್ಣಪುಟ್ಟ ವಿಷಯಗಳು ಮತ್ತು ಸಣ್ಣಪುಟ್ಟ ಆಸೆಗಳ ಈಡೇರಿಕೆಗಾಗಿ ಮಾರ್ಕೋನಿಂದ ಬೇರೆಯಾಗಲು ಬಯಸುತ್ತಿರಲಿಲ್ಲ. ಮ್ಯಾರೇಜ್ ಕೌನ್ಸಿಲರ್ ಸೋಫಿಯಾ ಲಾಂಗೆಯವರು ಸಹ ನಮ್ಮ ದಾಂಪತ್ಯವನ್ನು ಉಳಿಸಲು ಸಾಕಷ್ಟು ಪ್ರಯತ್ನವನ್ನು ಮಾಡಿದರು.

ಆದರೆ ಮಾತುಮಾತಿಗೂ ಜಗಳವಾಗುವುದು ಮುಂದುವರೆಯಿತು. ಒಮ್ಮೊಮ್ಮೆ ಇದು ಮಿತಿಮೀರುತ್ತಿತ್ತು. ಇಬ್ಬರೂ ಒಬ್ಬರಿಗೊಬ್ಬರು ನಿಂದಿಸಲು ಹಿಂದುಮುಂದು ನೋಡುತ್ತಿರಲಿಲ್ಲ. ಅವನು ನನಗೆ, 'ನಿನ್ನ ಕುಂಜಮ್ಮಾ... ಅವರ ನೆರಳಿನಲ್ಲಿ ನೀನು ದೊಡ್ಡವಳಾಗಿದ್ದೆ, ಅವರು ತುಂಬಾ ಮುಗ್ಧರು ಮತ್ತು ಪ್ರಾಮಾಣಿಕರಾಗಿದ್ದರು. ಆದರೆ ನೀನೇಕೆ ಸ್ವಾರ್ಥಿ ಮತ್ತು ವಂಚಕಿಯಾದೆ? ನೀನು ಅಬ್ರಾಹಮ್‌ನಿಗೆ ಕೆಟ್ಟ ಹೆಸರು ತಂದೆ, ಲಾರ್ಸ್‌ನನ್ನು ಸೈಕೊ ಮಾಡಿದೆ. ನಿನ್ನ ಇಬ್ಬರು ಮಾಜಿ ಪತಿಯರ ಬಗ್ಗೆ ನನ್ನ ಸಂಪೂರ್ಣ ಸಹಾನುಭೂತಿಯಿದೆ.'

'ನಿಮ್ಮೊಂದಿಗೆ ಜೀವನ ಸಾಗಿಸಿದ ನಂತರ, ಈಗ ನನಗೂ ಅವರು ಒಳ್ಳೆಯವರು ಎಂದು ಅನ್ನಿಸುತ್ತಿದೆ' ನಾನೂ ಚುಚ್ಚುತ್ತಿದ್ದೆ.

'ನಿನಗೆ ನಾನು ಡೈವೋರ್ಸ್ ಕೊಡ್ತೀನಿ. ನೋಡ್ತಿರು, ನಿನಗೆ ಮೂರನೆಯ ಡೈವೋರ್ಸ್ ಆಗುತ್ತೆ.'

'ತೊಂದ್ರೆಯಿಲ್ಲ, ಈ ಮೊದಲೇ ಎರಡು ಡೈವೋರ್ಸ್‌ಗಳನ್ನು ಎದುರಿಸಿದ್ದೇನೆ, ಮೂರನೆಯದನ್ನೂ ಎದುರಿಸುತ್ತೇನೆ' ಎಂದು ನಾನು ಎದುರುತ್ತರ ಕೊಡುತ್ತಿದ್ದೆ.

ಅವನು ತನ್ನ ಫ್ರೆಂಚ್ ಭಾಷೆಯಲ್ಲಿ ಕೆಟ್ಟದಾಗಿ ನಿಂದಿಸಿದ: 'ಮೆರದೆ (ಶಿಟ್), ಪುತಿನ್ (ವೇಶ್ಯೆ), ಸಲೋಪೆ (ಬಿಚ್)'

ನಾನು ಸಹ ಅವನ ಭಾಷೆಯಲ್ಲಿಯೇ ಅವನನ್ನು ಹಳಿದೆ: 'ಫಿಲ್ಸ್ ದೆ ಸಲೋಪೆ' (ಸನ್ ಆಫ್ ಎ ಬಿಚ್).

'ಛೀ...ಛೀ...' ಪಾಲ್ ಬಾಯಿಂದ ದುಃಖದ ಶಬ್ದ ಹೊರಟಿತು.

ಪಾಲ್, ನಾನೇನು ಮಾಡಲಿ? ನಾನು ವಿಚಿತ್ರ ಸಂಕಟವನ್ನು ಎದುರಿಸುತ್ತಿದ್ದೆ. ಕ್ರಮೇಣ ನಿಂದನೆ ಸಹ ನಿಂತಿತು. ಎಲ್ಲವೂ ಸ್ತಬ್ಧಗೊಂಡವು. ನಮ್ಮ ನಡುವಿನ ಮಾತುಕತೆ ನಿಂತಿತು. ಅವನು ಎಲ್ಲಿಗಾದರೂ ಹೋದರೆ, ನನಗೆ ಹೇಳುತ್ತಿರಲಿಲ್ಲ. ನಿಮ್ಮ ಡ್ಯಾಡಿ ಎಲ್ಲಿಗೆ ಹೋಗಿದ್ದಾರೆ ಎಂದು ನಾನು ನೀಲ್‌ನನ್ನು ಕೇಳಬೇಕಾಗುತ್ತಿತ್ತು.

ಬಡಪಾಯಿ ನೀಲ್‌ನಲ್ಲಿ ಒಮ್ಮೆ ಇದಕ್ಕೆ ಉತ್ತರವಿರುತ್ತಿತ್ತು, ಒಮ್ಮೊಮ್ಮೆ ಉತ್ತರವೂ ಇರುತ್ತಿರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಈಗ ಒಂದೇ ಮಾರ್ಗ ಉಳಿದಿತ್ತು – ನಾವು ಬೇರೆಯಾಗುವುದು! ಒಂದು ಸುಂದರ ಬದುಕಿನಲ್ಲಿ ಅಹಿತ ಘಟನೆಗಳು ಸಂಭವಿಸಿದರೆ, ಅದನ್ನು ದುರ್ಘಟನೆಯೆಂದು ತಿಳಿದು ಮುಂದುವರೆಯಬಹುದು, ಆದರೆ ಇದು ಹದ್ದು ಮೀರಿದ, ವಿಪತ್ತಿನ ಕಾಲವಾಗಿತ್ತು. ಗಂಭೀರವಾದ ನಾಶವಾಗಿತ್ತು. ನಾನು ಯಾವುದೇ ಸ್ಥಿತಿಯಲ್ಲಿ ವಿಚ್ಛೇದನವನ್ನು ಬಯಸುತ್ತಿರಲಿಲ್ಲ. ಆದರೆ ವಿಧಿಯಿಲ್ಲದೆ ನಾವು ವಿಚ್ಛೇದನದ ಪಿಟಿಶನ್ ಹಾಕಬೇಕಾಯಿತು. ನಮ್ಮ ಸಂಬಂಧ ವಿಶೇಷವಾಗಿ ಬಿಗಡಾಯಿಸಿತ್ತು. ಮಾರ್ಕೋಗೂ ಇನ್ನು ನಾವು ಜೊತೆಯಲ್ಲಿರುವುದು ಸಾಧ್ಯವಿಲ್ಲವೆಂದು ಅನ್ನಿಸಿತು.

ನಾವು ನ್ಯಾಯಾಲಯದಲ್ಲಿ ಪರಸ್ಪರ ಒಪ್ಪಿಗೆಯ ಮೇರೆಗೆ ವಿಚ್ಛೇದನ ತೆಗೆದುಕೊಂಡು, ವಿವಾದವನ್ನು ಬಗೆಹರಿಸಿಕೊಳ್ಳುವ ಕಾಗದ–ಪತ್ರಗಳಿಗೆ ಸಹಿ ಮಾಡಿದೆವು. ನ್ಯಾಯಾಲಯ ನಮಗೆ ನಾಲ್ಕು ತಿಂಗಳು ಬೇರೆಯಾಗಿ ವಾಸಿಸುವಂತೆ ಸಲಹೆ ನೀಡಿತು. ನೀವು ಆವೇಶದಲ್ಲಿ ತೀರ್ಮಾನವನ್ನು ಕೈಗೊಳ್ಳಬೇಡಿ, ವಿಚ್ಛೇದನಕ್ಕೂ ಮೊದಲು ಒಮ್ಮೆ ಸೂಕ್ತವಾಗಿ ಯೋಚಿಸಿ, ಈ ಅವಧಿಯಲ್ಲಿ ನೀವಿಬ್ಬರು ವಿಚ್ಛೇದನದ ಅರ್ಜಿಯನ್ನು ಮರಳಿ ಪಡೆಯದಿದ್ದರೆ, ನ್ಯಾಯಾಲಯ ಉಚಿತ ತನಿಖೆಯ ನಂತರ ವಿಚ್ಛೇದನಕ್ಕೆ ಡಿಕ್ರಿ ಕೊಡುತ್ತದೆ ಎಂದು ನಮಗೆ ತಿಳಿಸಲಾಯಿತು.

(ಸಶೇಷ)